## ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜಗಳೂರು.

ಉಪಸ್ಥಿತರು: ಶ್ರೀ ಮಹೇಂದ್ರ ಎಂ. ಬಿ.ಎ.ಎಲ್.ಎಲ್.ಬಿ,
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಜ ಗ ಳೂ ರು.

ದಿನಾಂಕ 24ನೇ ದಿವಸ ಫೆಬ್ರವರಿ 2018

ಅಸಲು ದಾವೆ ಸಂಖ್ಯೆ: 115/2017

ವಾದಿ : :: ಬಣಕಾರ ಈಶ್ವರಪ್ಪ ಬಿನ್ ಹಾಲಪ್ಪ

(ಪ್ರತಿನಿಧಿಸುವವರು ಶ್ರೀ ಡಿ.ಪಿ., ವಕೀಲರು)

ವಿರುದ್ಧ

ಪ್ರತಿವಾದಿಯರು: :: ಗೌರಮ್ಮ ಮತ್ತು ಇನ್ನೊಬ್ಬರು.

(ಪ್ರತಿನಿಧಿಸುವವರು ಶ್ರೀ ಎಸ್.ಹೆಚ್., ವಕೀಲರು)

### ಮದ್ಯಂತರ ಅರ್ಜಿ ಸಂಖ್ಯೆ I ರ ಮೇಲಿನ ಆದೇಶ

ವಾದಿಯು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ ಕಲಂ 151 ರಂತೆ ಮದ್ಯಂತರ ಅರ್ಜಿ ಸಂಖ್ಯೆ Iನ್ನು ಸಲ್ಲಿಸಿ, ದಾವಾ ಸ್ವತ್ತಿನಲ್ಲಿ ಹೇಳಿರುವ ಪೂರ್ವ ದಿಕ್ಕಿನ ದಾರಿಯಲ್ಲಿ ಪ್ರತಿವಾದಿಗಳಾಗಲೀ, ಅಥವಾ ಯಾರೇ ಆಗಲೀ ಯಾವುದೇ ಕಾಮಗಾರಿ ಮಾಡದಂತೆ ನಿರ್ಬಂಧಿಸುವ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶವನ್ನು ದಯಪಾಲಿಸಬೇಕಾಗಿ ಕೋರಿರುತ್ತಾರೆ.

2. ವಾದಿಯು ಈ ಮದ್ಯಂತರ ಅರ್ಜಿಯ ಜೊತೆಗೆ ಪ್ರಮಾಣಪತ್ರವನ್ನು ಪ್ರಮಾಣೀಕರಿಸಿ ಸಲ್ಲಿಸಿದ್ದು, ಅದರಲ್ಲಿ ಕಾರಣಗಳನ್ನು ತಿಳಿಸಿರುತ್ತಾರೆ. ವಾದಿ ಮತ್ತು ವಾದಿಯ ಸಹೋದರರು ವಾಸವಾಗಿರುವ ಹಾಲಿ ಮನೆಯ ಖಾತೆ ನಂ: 134 ಆಗಿದ್ದು, ಅದು ಪೂರ್ವ-ಪಶ್ಚಿಮ ಸುಮಾರು 103.3 ಮತ್ತು ಉತ್ತರ-ದಕ್ಷಿಣ 33.9 ಅಡಿಗಳು ಇರುತ್ತದೆ.

ವಾದಿ ಮತ್ತು ಅವರ ಸಹೋದರು ಪೂರ್ವ ಮತ್ತು ಉತ್ತರ ದಿಕ್ಕಿನಲ್ಲಿ ಬಾಗಿಲು ತೆರೆದು ವಾಸವಾಗಿರುತ್ತಾರೆ. ವಾದಿ ಮತ್ತು ಪ್ರತಿವಾದಿಯರ ಮನೆಗಳು ಪೂರ್ವಕ್ಕೆ ಇರುವ ದಾರಿಗೆ ಹೊಂದಿಕೊಂಡಂತೆ ಇರುತ್ತದೆ. ವಾದಿ ಮತ್ತು ವಾದಿಯ ಸಹೋದರ ನಿಂಗಪ್ಪರವರ ಮನೆಯ ಉತ್ತರ ದಿಕ್ಕಿಗೆ ಪ್ರತಿವಾದಿಗಳ ವಾಸದ ಮನೆಯಿದ್ದು ಈ ಮನೆಗಳ ಅಂತರದಲ್ಲಿ ಸರ್ಕಾರಿ ದಾರಿ ಇರುತ್ತದೆ. ಇದು ಸುಮಾರು 20 ಅಡಿಗಳನ್ನು ಹೊಂದಿರುತ್ತದೆ. ಈ ದಾರಿಯನ್ನು ವಾದಿ ಮತ್ತು ಅವರ ಸಹೋದರರು ಹಲವು ವರ್ಷಗಳಿಂದ ಉಪಯೋಗಿಸುತ್ತಿದ್ದು, ಚಿರಬೋಗದ ಹಕ್ಕನ್ನು ಹೊಂದಿರುತ್ತಾರೆ. ಅದನ್ನು ಉಪಯೋಗಿಸುತ್ತಿರುತ್ತಾರೆ. ವಾದಿಯ ವಾಸದ ಮನೆಯ ಉತ್ತರ ದಿಕ್ಕಿನ ವಾಸಿಯಾದ ಸಿದ್ದಯ್ಯ ಎಂಬುವವರಿಂದ ವಾದಿಯ ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆದಿರುತ್ತಾರೆ. ಆ ದಿನಾಂಕದಿಂದಲೂ ಉಪಬೋಗ ಮಾಡುತ್ತಿರುತ್ತಾರೆ. ವಾದಿಗೆ ಈ ಮೇಲೆ ಹೇಳಿದ ದಾರಿ ಬಿಟ್ಟರೆ ಬೇರೆ ದಾರಿ ಇರುವುದಿಲ್ಲ. ವಾದಿ ಮತ್ತು ಅವರ ಸಹೋದರರು ಅದೇ ಜಾಗದಲ್ಲಿ ಓಡಾಡುತ್ತಿರುತ್ತಾರೆ. ಪ್ರತಿವಾದಿಗಳು ದುರುದ್ದೇಶದಿಂದ ಸದರಿ ದಾರಿಯಲ್ಲಿ ಅಂದರೆ 20 ಅಡಿ ಜಾಗದಲ್ಲಿ ಅವರ ಮನೆಯ ಗೋಡೆಗೆ ಲಗತ್ತಾಗಿ ದಕ್ಷಿಣ ದಿಕ್ಕಿನ ಗೋಡೆಯಿಂದ ವಾದಿಯ ತಮ್ಮನಾದ ನಿಂಗಪ್ಪನ ಮನೆಯ ಗೋಡೆಯ ಕಡೆಗೆ ಸುಮಾರು 10 ರಿಂದ 12 ಅಡಿ ಜಾಗವನ್ನು ಒತ್ತುವರಿ ಮಾಡಿ ಷೆಡ್ಡನ್ನು ನಿರ್ಮಿಸಿರುತ್ತಾರೆ.

3. ವಾದಿಯು ಈ ಬಗ್ಗೆ ಜಗಳೂರು ಪೋಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಪ್ರತಿವಾದಿಯರು ಸದರಿ ಷೆಡ್ಡನ್ನು ಕಿತ್ತುಕೊಳ್ಳುತ್ತೇನೆ ಎಂದು ಹೇಳಿದ್ದು, ನಂತರ ಕಿತ್ತುಕೊಂಡಿರುವುದಿಲ್ಲ. ಆದ್ದರಿಂದ ವಾದಿಯು ಈ ದಾವೆಯನ್ನು ಸಲ್ಲಿಸಿದ್ದು, ಹಾಗೆಯೇ ಈ ಮದ್ಯಂತರ ಅರ್ಜಿಯನ್ನು ಸಹ ಸಲ್ಲಿಸಿರುತ್ತಾರೆ. ಈ ಮದ್ಯಂತರ ಅರ್ಜಿಯನ್ನು ಪುರಸ್ಕರಿಸಿ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಪರಿಹಾರವನ್ನು ನೀಡಬೇಕೆಂದು ವಾದಿಯು ಕೋರಿರುತ್ತಾರೆ.

*4. ಈ ಮದ್ಯಂತರ ಅರ್ಜಿಯ ಜೊತೆಗೆ ಪ್ರತಿವಾದಿಯರು ತಮ್ಮ ತಕರಾರು ಸಲ್ಲಿಸಿದ್ದು, ಅದರಲ್ಲಿ ವಾದಿಯ ಹೆಸರಿಗೆ ಖಾತೆ ಬದಲಾವಣೆ ಮಾಡುವಾಗ ಖಾತೆ ನಂಬರ್ ಮತ್ತು ವಿಸ್ತೀರ್ಣವು ಬದಲಾವಣೆ ಆಗಿರುತ್ತದೆ. ವಾದಿಯು 20 ಅಡಿಗಳ ಸರ್ಕಾರಿ ರಸ್ತೆಯನ್ನು ಚಿರಿಭೋಗದ ಆಧಾರದ ಮೇಲೆ ಉಪಯೋಗಿಸುತ್ತಿದ್ದೇನೆ ಎಂಬುದನ್ನು ಅಲ್ಲಗಳೆದಿರುತ್ತಾರೆ. ಈ ರಸ್ತೆಯು ಸಾರ್ವಜನಿಕ ರಸ್ತೆಯಾಗಿರುತ್ತದೆ. ವಾದಿಯು ದಾವಾ ಸ್ವತ್ತನ್ನು ಸಿದ್ದಯ್ಯ ಎಂಬುವವರಿಂದ ಕ್ರಯಕ್ಕೆ ಪಡೆದಿರುತ್ತೇನೆ ಎಂದು ಹೇಳುವುದು ಸುಳ್ಳಾಗಿರುತ್ತದೆ. ಏಕೆಂದರೆ ಮರಳಸಿದ್ದಯ್ಯರವರಿಗೆ ಮಕ್ಕಳಿರುವುದಿಲ್ಲ, ಅವರು ಅವಿವಾಹಿತರಾಗಿರುತ್ತಾರೆ. ದಾವಾ ಸ್ವತ್ತಿನ ಚೆಕ್ಕುಬಂದಿಯು ಸರಿಯಾಗಿರುವುದಿಲ್ಲ, ದಾವಾ ಸ್ವತ್ತಿನ ಪೂರ್ವದಿಕ್ಕಿಗೆ ಗ್ರಾಮ ಪಂಚಾಯ್ತಿ ದಾರಿ ಇದೆ ಎಂದು ಹೇಳಿರುವುದು ಸುಳ್ಳಾಗಿರುತ್ತದೆ. ಏಕೆಂದರೆ ಅಲ್ಲಿ ಪ್ರತಿವಾದಿ 2 ರವರಿಗೆ ಸೇರಿದ ಖಾಲಿ ಜಾಗ ಹಾಗೂ ಲಕ್ಕಮ್ಮ ದೇವಸ್ಥಾನದ ಖಾಲಿ ಜಾಗ ಇರುತ್ತದೆ. ಪ್ರತಿವಾದಿಯರು ಯಾವುದೇ ಒತ್ತುವರಿಯನ್ನು ಮಾಡಿರುವುದಿಲ್ಲ, ವಾದಿ ಮತ್ತು ಪ್ರತಿವಾದಿಯರ ಮನೆಯ ಮದ್ಯ ಇದ್ದ ದಾರಿಯನ್ನು ವಾದಿಯು ಈಗಾಗಲೇ ಒತ್ತುವರಿ ಮಾಡಿ ಮನೆ ಕಟ್ಟಿಸಿಕೊಂಡಿರುತ್ತಾರೆ. ಮನೆ ಕಟ್ಟಲು ಯಾವುದೇ ಪರವಾನಗಿ ಪಡೆದಿರುವುದಿಲ್ಲ, ವಾದಿಯು ಪ್ರತಿವಾದಿಯರಿಗೆ ತೊಂದರೆ ನೀಡುವ ಉದ್ದೇಶದಿಂದ ಈ ಮದ್ಯಂತರ ಅರ್ಜಿಯನ್ನು ಸಲ್ಲಿಸಿದ್ದು, ಆದಕಾರಣ ಈ ಮದ್ಯಂತರ ಅರ್ಜಿಯನ್ನು ಖರ್ಚು ಸಹಿತ ವಜಾಗೊಳಿಸಬೇಕೆಂದು ಪ್ರತಿವಾದಿಯರು ಕೋರಿರುತ್ತಾರೆ.*

*5. ಈ ಮದ್ಯಂತರ ಅರ್ಜಿಯನ್ನು ತೀರ್ಮಾನಿಸಲು ಈ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವಿಸುತ್ತದೆ.*

*1)* ವಾದಿಯು ಮೇಲ್ನೋಟಕ್ಕೆ ರುಜುವಾತು ಆಗುವ ಪ್ರಕರಣ ಹೊಂದಿರುತ್ತಾರೆಯೇ**?**

*2)* ನ್ಯಾಯದ ಅನುಕೂಲತೆಯ ಒಲವು ವಾದಿಯ ಪರವಾಗಿ ಇದೆಯೇ**?**

3) ಮಧ್ಯಂತರ ಅರ್ಜಿ ಸಂಖ್ಯೆ I ನ್ನು ಪುರಸ್ಕರಿಸದಿದ್ದರೆ ವಾದಿಗೆ ತುಂಬಲಾರದ ನಷ್ಟ ಮತ್ತು ಕ್ಷತಿ ಉಂಟಾಗುವುದೇ?

4) ಮಾಡುವ ಆದೇಶ ಏನು?

6. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

7. ವಾದಪತ್ರ, ಪ್ರತಿವಾದಪತ್ರ, ಮಧ್ಯಂತರ ಅರ್ಜಿ, ತಕರಾರು, ಉಭಯಪಕ್ಷಗಾರರು ಹಾಜರುಪಡಿಸಿರುವ ದಾಖಲಾತಿಗಳು ಇವುಗಳನ್ನು ಈ ನ್ಯಾಯಾಲಯವು ಪರಿಶೀಲಿಸಿ, ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಂದ ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತದೆ.

ಅಂಶ ನಂಃ 1 ಃ ನಕರಾತ್ಮಕವಾಗಿ,
ಅಂಶ ನಂಃ 2 ಃ ನಕರಾತ್ಮಕವಾಗಿ,
ಅಂಶ ನಂಃ 3 ಃ ನಕರಾತ್ಮಕವಾಗಿ
ಅಂಶ ನಂಃ 4 ಃ ಅಂತಿಮ ಆದೇಶದಂತೆ,

## ಃ ಕಾ ರ ಣ ಗ ಳು ಃ

8. ಅಂಶ ನಂಃ 1 ರಿಂದ 3 ಃ ಈ ಮೂರು ಅಂಶಗಳಿಗೆ ಚರ್ಚಿಸಲಾಗಿರುವ ವಿಷಯಗಳು ಒಂದೇ ಆಗಿರುವುದರಿಂದ ಅವುಗಳ ಪುನಾರಾವರ್ತನೆಯನ್ನು ತಡೆಯುವ ಸಲುವಾಗಿ ಈ ಮೂರು ಅಂಶಗಳನ್ನು ಒಟ್ಟಿಗೆ ಚರ್ಚಿಸಲಾಗಿದೆ.

9. ವಾದಿಯ ಪರ ವಕೀಲರು ತಮ್ಮ ವಾದ ಮಂಡಿಸುತ್ತಾ, ದಾವಾ ಸ್ವತ್ತಿಗೆ ತಿರುಗಾಡಲು ವಾದಿ ಮತ್ತು ಅವರ ಸಹೋದರರರು 20 ಅಡಿ ಸರ್ಕಾರಿ ಜಾಗವನ್ನು ಉಪಯೋಗಿಸುತ್ತಿರುತ್ತಾರೆ. ಅದು ವಾದಿಯ ಚಿರಬೋಗದ ಹಕ್ಕಾಗಿರುತ್ತದೆ. ಆದರೂ ಪ್ರತಿವಾದಿಯರು ವಾದಿಗೆ ತೊಂದರೆ ನೀಡಲು ಅವರ ಹಕ್ಕಿಗೆ ಚ್ಯುತಿ ತರಲು ಸದರಿ ತಿರುಗಾಡುವ ಸರ್ಕಾರಿ ರಸ್ತೆಯಲ್ಲಿ ಷೆಡ್ಡನ್ನು ನಿರ್ಮಿಸಿರುತ್ತಾರೆ. ಆದಕಾರಣ ಪ್ರತಿವಾದಿಯರು

ಸದರಿ ಜಾಗದಲ್ಲಿ ಯಾವುದೇ ಬುನಾದಿ ಹಾಕದಂತೆ ಕಟ್ಟಡ ನಿರ್ಮಿಸದಂತೆ ತಾತ್ಕಲಿಕ ನಿರ್ಬಂಧಕಾಜ್ಞೆಯ ಪರಿಹಾರವನ್ನು ನೀಡಬೇಕಾಗಿ ಕೋರಿರುತ್ತಾರೆ.

10. ಪ್ರತಿವಾದಿಯರ ಪರ ವಕೀಲರು ತಮ್ಮ ವಾದವನ್ನು ಮಾಂಡಿಸುತ್ತಾ, ವಾದಿಯು ಹೇಳುವಂತೆ ಪ್ರತಿವಾದಿಯು ಯಾವುದೇ ಒತ್ತುವರಿ ಮಾಡಿರುವುದಿಲ್ಲ. ವಾದಿಯ ಹೆಸರಿಗೆ ಖಾತೆ ಮಾಡುವಾಗ ತಪ್ಪಾಗಿ ಖಾತೆ ನಂಬರ್ ಮತ್ತು ವಿಸ್ತೀರ್ಣವನ್ನು ನಮೂದು ಮಾಡಿರುತ್ತಾರೆ. ವಾದಿಯು ಸರ್ಕಾರಿ ರಸ್ತೆಯನ್ನು ಒತ್ತುವರಿ ಮಾಡಿ ಆರ್.ಸಿ.ಸಿ. ಮನೆಯನ್ನು ನಿರ್ಮಿಸಿರುತ್ತಾರೆ. ಸದರಿ ಮನೆ ನಿರ್ಮಾಣ ಮಾಡಲು ಯಾವುದೇ ಪರವಾನಗಿ ಪಡೆದುಕೊಂಡಿರುವುದಿಲ್ಲ. ವಾದಿಯು ದುರುದ್ದೇಶದಿಂದ ಪ್ರತಿವಾದಿಯರಿಗೆ ತೊಂದರೆ ನೀಡುವ ಉದ್ದೇಶದಿಂದ ಈ ಮದ್ಯಂತರ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆದಕಾರಣ ಈ ಮದ್ಯಂತರ ಅರ್ಜಿಯನ್ನು ವಜಾಗೊಳಿಸಬೇಕಾಗಿ ಕೋರಿರುತ್ತಾರೆ.

11. ವಾದಿಯರು ಹಾಜರುಪಡಿಸಿರುವ ದಾಖಲೆಗಳನ್ನು ಪರಶೀಲಿಸಿದಾಗ, ದಿಃ20-11-1978 ರ ಕ್ರಯಪತ್ರದ ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ವಾದಿಯು ದಾವಾ ಸ್ವತ್ತನ್ನು ಖರೀದಿ ಮಾಡುವ ಬಗ್ಗೆ ತಿಳಿದುಬರುತ್ತದೆ. ಕರ ಆಕರಣೆಯ ರಿಜಿಸ್ಟರ್, ಅಸೆಸ್‌ಮೆಂಟ್ ರಿಜಿಸ್ಟರ್, ಭಾವಚಿತ್ರಗಳು, ರಶೀದಿ, ಸಿ.ಡಿ. ಖಾತೆದಾರರ ಪಟ್ಟಿಯ ಜೆರಾಕ್ಸ್ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ.

12. ಪ್ರತಿವಾದಿಯರು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ಹೌಸ್‌ಲೀಸ್ಟ್ ರಿಜಿಸ್ಟರ್‌ಗಳು, ಖಾತೆದಾರರ ಪಟ್ಟಿ ಕಂದಾಯ ರಶೀದಿ, ಮನೆಕಟ್ಟಡದ ಪರವಾನಗಿ, ಗ್ರಾಮಪಂಚಾಯಿತಿಯ ನಡವಳಿ , ನಕಾಶೆ ಇವುಗಳನ್ನು ಹಾಜರುಪಡಿಸಿರುತ್ತಾರೆ.

13. ಈ ಹಂತದಲ್ಲಿ ನ್ಯಾಯಾಲಯವು ದಾವೆಯ ಗುಣಗಳ ಬಗ್ಗೆ ಯಾವುದೇ ವಿಚಾರಣೆ ಮಾಡಲು ಸಾಧ್ಯವಿಲ್ಲ, ಕೇವಲ ದಾವೆಯು ಮೇಲ್ನೋಟಕ್ಕೆ ವಾದಿಯ ಪರವಾಗಿದೆಯೇ ಎಂಬುವುದನ್ನು ಮಾತ್ರ ನೋಡಬೇಕಾಗಿರುತ್ತದೆ ಮತ್ತು ಮೇಲ್ನೋಟದ ಮಾಲಿಕತ್ವವನ್ನು ನೋಡದೆ ಮೇಲ್ನೋಟದ ದಾವೆಯ ಬಗ್ಗೆ ಮಾತ್ರ ನೊಡಬೇಕಾಗುತ್ತದೆ.

ತಾತ್ಕಾಲಿಕ ತಡೆಯಾಜ್ಞೆ ನೀಡಲು ಇರುವ ಅತಿ ಮುಖ್ಯ ತತ್ವವೆಂದರೆ, ನ್ಯಾಯಾಲಯವು ತಾತ್ಕಾಲಿಕ ತಡೆಯಾಜ್ಞೆ ಅರ್ಜಿಯನ್ನು ತೀರ್ಮಾನಿಸಬೇಕಾದರೆ, ನ್ಯಾಯಾಲಯವು ಮೇಲ್ನೋಟಕ್ಕೆ ಕಾಣುವ ಮಾಲೀಕತ್ವವನ್ನು ನೋಡದೆ ಮದ್ಯಂತರ ಪರಿಹಾರವನ್ನು ನೀಡಲು ಮೇಲ್ನೋಟಕ್ಕೆ ಸಾಭೀತಾಗುವ ಅಂಶಗಳ ಬಗ್ಗೆ ಮುಖ್ಯವಾಗಿ ನೋಡಬೇಕಾಗುತ್ತದೆ.

*14.* ಪ್ರಾಥಮಿಕವಾಗಿ ಮದ್ಯಂತರ ಪರಿಹಾರವನ್ನು ಕೊಡುವ ಪ್ರಮುಖ ಉದ್ದೇಶವೇನೆಂದರೆ, ಪಕ್ಷಗಾರರ ಕಾನೂನುಬದ್ಧ ಹಕ್ಕುಗಳು ತೀರ್ಮಾನವಾಗುವವರೆಗೆ ಮತ್ತು ಪಕ್ಷಗಾರರ ಕ್ಲೇಮುಗಳು ತೀರ್ಮಾನವಾಗುವವರೆಗೆ ಆ ಹಕ್ಕುಗಳು ಮತ್ತು ಕ್ಲೇಮುಗಳನ್ನು ರಕ್ಷಣೆ ಮಾಡುವುದಾಗಿದೆ. ತಾತ್ಕಾಲಿಕ ನಿರ್ಬಂಧಕಾಜ್ಞೆ ಕೊಡುವ ಉದ್ದೇಶ ಭವಿಷ್ಯದ ಸಮಸ್ಯೆಗಳನ್ನು, ಪಕ್ಷಗಾರರ ಮೇಲೆ ಆಗುವ ಹಾನಿಯನ್ನು ತಡೆಗಟ್ಟುವುದಾಗಿರುತ್ತದೆ.

*15.* ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ಮಾಡುವ ಅಧಿಕಾರ ನ್ಯಾಯಾಲಯದ ವಿವೇಚನೆಗೆ ಬಿಟ್ಟದ್ದಾಗಿರುತ್ತದೆ. ಆ ವಿವೇಚನೆಯನ್ನು ಸಕಾರಣದಿಂದ ನ್ಯಾಯಿಕವಾಗಿ ಕಾನೂನುಬದ್ದ ತತ್ವಗಳ ಮೂಲಕ ಚಲಾಯಿಸುವುದು ಬಹಳ ಮುಖ್ಯವಾಗಿರುತ್ತದೆ. ಸದರಿ ಆದೇಶವನ್ನು ಪ್ರತಿವಾದಿಯರಿಗೆ ತೊಂದರೆಯಾಗದ ರೀತಿಯಲ್ಲಿ ಚಲಾಯಿಸಬೇಕಾಗುತ್ತದೆ.

*16.* ವಾದಿಯು ಮುಖ್ಯವಾಗಿ ಮೇಲ್ನೋಟಕ್ಕೆ ಸಾಭೀತಾಗುವ ರೀತಿಯಲ್ಲಿ ತಮ್ಮ ಕ್ಲೇಮ್‌ನ್ನು ಮಾಡಬೇಕಾಗುತ್ತದೆ. ಇದು ಬಹಳ ಮುಖ್ಯ ನಿಯಮವಾಗಿರುತ್ತದೆ. ನ್ಯಾಯಾಲಯಕ್ಕೆ ಈ ದಾವೆ ಬಲವಾಗಿದ್ದು ವಿಚಾರಣೆಗೆ ಯೋಗ್ಯವಾಗಿದೆ ಎಂದು ಕಂಡುಬರಬೇಕಾಗುತ್ತದೆ.

*17.* ಈ ಮೇಲ್ಕಂಡ ತತ್ವಗಳನ್ನು ಆಧರಿಸಿ, ಈ ದಾವೆಯ ಬಗ್ಗೆ ಪರಿಶೀಲಿಸಿದಾಗ, ವಾದಿಯು ಈ ದಾವೆಯನ್ನು ಚಿರಬೋಗದ ಹಕ್ಕಿನ ಪ್ರಕಾರ ಘೋಷಣಾತ್ಮಕ ಡಿಕ್ರಿ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾವನ್ನು ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಈ ಹಂತದಲ್ಲಿ ಒತ್ತುವರಿ ಬಗ್ಗೆ ನಿರ್ಧರಿಸಲು ಸಾಧ್ಯವಿರುವುದಿಲ್ಲ, ವಾದಿಯು ತನ್ನ ಮದ್ಯಂತರ ಅರ್ಜಿಯ

ಪ್ರಮಾಣಪತ್ರದಲ್ಲಿ ಪ್ರತಿವಾದಿಯರು ಸರ್ಕಾರಿ ತಿರುಗಾಡುವ ದಾರಿಯನ್ನು ಒತ್ತುವರಿ ಮಾಡಿ ಷೆಡ್ಡನ್ನು ನಿರ್ಮಾಣ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಈ ಬಗ್ಗೆ ಈ ಹಂತದಲ್ಲಿ ತೀರ್ಮಾನ ಮಾಡಲು ಸಾಧ್ಯವಿರುವುದಿಲ್ಲ ಇದಕ್ಕೆ ಪಕ್ಷಗಾರರ ವಿಚಾರಣೆ ಆಗಬೇಕಾಗಿರುತ್ತದೆ.

18. ವಾದಿಯು ಹಾಜರುಪಡಿಸಿರುವ ದಾಖಲೆ ನೋಡಿದಾಗ, ಅದರಲ್ಲಿ ಹಾಜರುಪಡಿಸಿರುವ ಭಾವಚಿತ್ರಗಳನ್ನು ಪರಿಶೀಲಿಸಿದಾಗ, ಈಗಾಗಲೇ ಷೆಡ್ ನಿರ್ಮಾಣ ಗೊಂಡಿರುವುದು ಕಂಡುಬರುತ್ತದೆ. ಆದ್ದರಿಂದ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ಯಾವುದೇ ಕಾಮಗಾರಿ ಮಾಡಬಾರದು ಎಂದು ತಾತ್ಕಾಲಿಕ ನಿರ್ಬಂದಕಾಜ್ಞೆ ಆದೇಶ ನೀಡಲು ಸಾಧ್ಯವಿರುವುದಿಲ್ಲ. ಏಕೆಂದರೆ ಈಗಾಗಲೇ ಷೆಡ್ಡು ನಿರ್ಮಾಣಗೊಂಡಿರುತ್ತದೆ. ಪ್ರತಿವಾದಿಯರು ಬುನಾದಿ ಹಾಕಲು ಪ್ರಯತ್ನಿಸಿದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಪ್ರತಿವಾದಿಯರು ಒತ್ತುವರಿ ಮಾಡಿರುತ್ತಾರೆ ಎಂಬ ಬಗ್ಗೆ ತೊಂದರೆ ನೀಡಿರುತ್ತಾರೆ ಎಂಬ ಬಗ್ಗೆ ಗ್ರಾಮಪಂಚಾಯಿತಿಯವರಿಗೆ ಆಗಲೀ ಅಥವಾ ಸಂಬಂದಪಟ್ಟ ಪ್ರಾಧಿಕಾರದವರಿಗೆ ಆಗಲೀ ವಾದಿಯು ಯಾವುದೇ ದೂರು ನೀಡಿರುವುದಿಲ್ಲ.

19. ಪ್ರತಿವಾದಿಯರು ತಮ್ಮ ತಕರಾರಿನಲ್ಲಿ ವಾದಿಯೇ ಸದರಿ ಜಾಗವನ್ನು ಒತ್ತುವರಿ ಮಾಡಿದ್ದು, ಯಾವುದೇ ಪರವಾನಗಿ ಪಡೆಯದೇ ಸದರಿ ಒತ್ತುವರಿ ಸ್ಥಳದಲ್ಲಿ ಆರ್.ಸಿ.ಸಿ. ಮನೆಯನ್ನು ನಿರ್ಮಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. ಅಂದರೆ ಈ ಹಂತದಲ್ಲಿ ಒತ್ತುವರಿ ಬಗ್ಗೆ ಯಾವುದೇ ನಿರ್ಣಯವನ್ನು ಕೈಗೊಳ್ಳಲು ಸಾಧ್ಯವಿಲ್ಲ. ಒತ್ತುವರಿ ಬಗ್ಗೆ ಅಳತೆ ಮಾಡಿಸಿ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಪಕ್ಷಗಾರರು ಹಾಜರುಪಡಿಸಿರುವುದಿಲ್ಲ. ಈ ಹಂತದಲ್ಲಿ ದಾವೆಯ ಗುಣಾವಾಗುಣಗಳ ಬಗ್ಗೆ ಚರ್ಚಿಸಲು ಸಾಧ್ಯವಿರುವುದಿಲ್ಲ, ಕೇವಲ ದಾವೆಯು ಮೇಲ್ನೋಟಕ್ಕೆ ವಾದಿಯ ಪರವಾಗಿದೆಯೇ ಎಂದು ಮಾತ್ರ ನೋಡಬೇಕಾಗುತ್ತದೆ. ಈ ದಾವೆಯನ್ನು ನೋಡಿದಾಗ ಮೇಲ್ನೋಟಕ್ಕೆ ದಾವೆಯು ವಾದಿಯ ಪರವಾಗಿರದೇ ಇರುವುದು ಕಂಡುಬರುತ್ತದೆ.

*20. ತಾತ್ಕಾಲಿಕ ನಿರ್ಬಂಧಕಾಜ್ಞೆ ನೀಡಲು ಇರುವ ಮತ್ತೊಂದು ಮುಖ್ಯ ತತ್ವವಾದ ಅನುಕೂಲತೆಯ ಒಲವು ವಾದಿಯ ಪರವಾಗಿ ಇರದೇ ಇರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಈ ಮದ್ಯಂತರ ಅರ್ಜಿಯನ್ನು ಪುರಸ್ಕರಿಸಿ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡದೇ ಇದ್ದರೆ ವಾದಿಗೆ ಯಾವುದೇ ನಷ್ಟ ಉಂಟಾಗುವುದಿಲ್ಲ. ಒಂದು ವೇಳೆ ನಿರ್ಬಂಧಕಾಜ್ಞೆ ನೀಡಿದರೆ ಎದುರು ಪಕ್ಷಗಾರರಿಗೆ ತೊಂದರೆ ಹಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಈ ನ್ಯಾಯಾಲಯವು ಅಂಶ ನಂಃ 1 ರಿಂದ 3ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.*

*21. ಅಂಶ ನಂಃ 4ಃ ಈ ಮೇಲ್ಕಂಡ 1 ರಿಂದ 3ನೇ ಅಂಶಗಳಿಗೆ ಸಂಬಂಧಿಸಿದಂತೆ ಚರ್ಚಿಸಿದ ಕಾರಣಗಳಿಗಾಗಿ ವಾದಿಯು ತಾತ್ಕಾಲಿಕ ನಿರ್ಬಂಧಕಾಜ್ಞೆಯ ಪರಿಹಾರವನ್ನು ಪಡೆದುಕೊಳ್ಳಲು ಅರ್ಹರಾಗಿರುವುದಿಲ್ಲ ಎಂದು ಈ ನ್ಯಾಯಾಲಯವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.*

*ಃಃಆದೇಶಃಃ*

*ವಾದಿಯು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ ಕಲಂ 151 ರಂತೆ ಸಲ್ಲಿಸಿರುವ ಮದ್ಯಂತರ ಅರ್ಜಿ ಸಂಖ್ಯೆ Iನ್ನು ವಜಾಗೊಳಿಸಲಾಗಿದೆ.*

*ವೆಚ್ಚದ ಬಗ್ಗೆ ಯಾವುದೇ ಆದೇಶವಿಲ್ಲ.*

*(ಶೀಘ್ರಲಿಪಿಗಾರರಿಗೆ ಗಣಕೀಕೃತಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, 2018ನೇ ಇಸವಿ ಫೆಬ್ರವರಿ 24ನೇ ದಿನಾಂಕದಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)*

*(ಮಹೇಂದ್ರ ಎಂ.),*
*ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,*
*ಜಗಳೂರು*

ತೆರೆದ ನ್ಯಾಯಾಲಯದಲ್ಲಿ ಪ್ರತ್ಯೇಕವಾದ ಆದೇಶವನ್ನು ಉಚ್ಛರಿಸಲಾಯಿತು.

:: ಆದೇಶ ::

ವಾದಿಯು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ ಕಲಂ 151 ರಂತೆ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ I ನ್ನು ವಜಾಗೊಳಿಸಲಾಗಿದೆ.

ವೆಚ್ಚದ ಬಗ್ಗೆ ಯಾವುದೇ ಆದೇಶವಿಲ್ಲ.

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಜಗಳೂರು